## ಸ್ವಾತಂತ್ರ್ಯ ಹೋರಾಟಗಾರರ ಪತ್ನಿ/ವಿಧವಾ ಪತ್ನಿಯರಿಗೆ ಉಚಿತ ಬಸ್ ಕೊಪನ್‌ಗಳ ಯೋಜನೆ:

ಸಂಸ್ಥೆಯ ವ್ಯಾಪ್ತಿಯಲ್ಲಿ ಸ್ವಾತಂತ್ರ್ಯ ಹೋರಟಗಾರರ ಪತ್ನಿ/ವಿಧವಾ ಪತ್ನಿಯರಿಗೆ ಉಚಿತ ಬಸ್ ಕೊಪನ್‌ಗಳ ವ್ಯವಸ್ಥೆಯನ್ನು ಜಾರಿಗೆ ತರಲಾಗಿರುತ್ತದೆ. ಸದರಿ ಕೊಪನ್‌ಗಳ ಮೊತ್ತ ಪ್ರತಿ ವರ್ಷಕ್ಕೆ ರೂ.2000/-. ಸದರಿ ಕೊಪನ್‌ಗಳನ್ನು ಟಿಕೇಟ್‌ಗಳ ಬದಲಾಗಿ ತಾವು ಪ್ರಯಾಣಿಸುವ ಮೊತ್ತಕ್ಕೆ ಸಮನಾಗಿ ನೀಡಿ ಪ್ರಯಾಣಿಸಲು ಅವಕಾಶ ಕಲ್ಪಿಸಲಾಗಿದೆ.
ಬಸ್ ಪ್ರಯಾಣದ ಕೂಪನ್‌ಗಳ ಸೌಲಭ್ಯಗಳನ್ನು ಪಡೆಯಲಿಚ್ಚಿಸುವ ಸ್ವಾತಂತ್ರ್ಯ ಹೋರಾಟಗಾರರ ಪತ್ನಿ/ವಿಧವಾ ಪತ್ನಿ ಈ ಕೆಳಕಂಡ ಮಾಹಿತಿ ಮತ್ತು ದಾಖಲೆಗಳೊಂದಿಗೆ ಮೊಕ್ತಾ ಅವರು ವಾಸಿಸುತ್ತಿರುವ ಜಿಲ್ಲೆಯ ಜಿಲ್ಲಾಧಿಕಾರಿಗಳಿಗೆ ಅರ್ಜಿಯನ್ನು ಸಲ್ಲಿಸಬೇಕು.

1. ಸ್ವಾತಂತ್ರ್ಯ ಸೈನಿಕ ಸನ್ಮಾನ ಕುಟುಂಬ ಗೌರವಧನ ಮಂಜೂರಾದ ಸರ್ಕಾರಿ ಆದೇಶ.
2. ಕರ್ನಾಟಕ ಮಹಾ ಲೇಖಪಾಲರು ನೀಡಿರುವ ಗೌರವಧನ ಬಟವಾಡೆ ಆದೇಶ (ಪಿ.ಪಿ.ಓ).
3. ಪತ್ರಾಂಕಿತ ಅಧಿಕಾರಿಗಳು ದೃಢೀಕರಿಸಿದ ಸ್ವಾತಂತ್ರ್ಯ ಹೋರಾಟಗಾರರ ಪತ್ನಿ/ವಿಧವಾ ಪತ್ನಿಯರ ಇತ್ತೀಚಿನ 4 ಪಾಸು ಪೋರ್ಟ್ ಅಳತೆಯ ಭಾವ ಚಿತ್ರಗಳು.
4. ಅರ್ಜಿದಾರರು ಸ್ವಾತಂತ್ರ್ಯ ಹೋರಾಟಗಾರರ ಪತ್ನಿ/ವಿಧವಾ ಪತ್ನಿ ಎಂದು ದೃಢೀಕರಿಸಿಕೊಳ್ಳಲು ಜಿಲ್ಲಾಧಿಕಾರಿಗಳು ನಿಗಧಿಪಡಿಸುವ ಇನ್ನಿತರ ಮಾಹಿತಿ/ದಾಖಲೆಗಳು.

ಜಿಲ್ಲಾಧಿಕಾರಿಗಳು ಮೇಲ್ಕಂಡ ಎಲ್ಲಾ ದಾಖಲೆಗಳನ್ನು ಪರಿಶೀಲಿಸಿ ಅವರಿಗೆ ಅವಶ್ಯಕವೆಂದು ಕಂಡುಬರುವಂತಹ ವಿಚಾರಣೆಗಳನ್ನು ಮಾಡಿ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಗಳಿಗೆ ಸ್ವಾತಂತ್ರ್ಯ ಹೋರಾಟಗಾರರ ಪತ್ನಿ/ವಿಧವಾ ಪತ್ನಿ ಯವರಿಗೆ ಉಚಿತ ಬಸ್ ಪ್ರಯಾಣದ ಕೂಪನ್‌ಗಳನ್ನು ನೀಡಲು ಶಿಪಾರಸ್ಸು ಮಾಡುವರು. ಈ ಶಿಫಾರಸ್ಸಿಗನುಗುಣವಾಗಿ ಸಂಬಂಧಪಟ್ಟ ವಿಭಾಗೀಯ ನಿಯಂತ್ರಣಾಧಿಕಾರಿಗಳು ತಲಾ ರೂ.2000/- ಮೊತ್ತದ ಕೂಪನ್‌ಗಳನ್ನು ವಿತರಿಸಲು ಕ್ರಮ ಕೈಗೊಳ್ಳುವರು.